ಹಾಕುವುದು ಎಲ್ಲವೂ ಬರಹದ ಜತೆಗೇ ನಡೆಯುವ ಕ್ರಿಯೆ. ಪ್ರತಿ ಲೇಖಕನಿಗೂ ತನ್ನದೇ ಬರಹದ ವಿಧಾನವಿರುತ್ತದೆ. ನನ್ನ ಬರವಣಿಗೆಯ ಕುರಿತು ಸ್ಥೂಲವಾಗಿ ಹೇಳುವುದಾದರೆ, ನಿತ್ಯದ ಆಗುಹೋಗುಗಳಲ್ಲಿ ವಿಶಿಷ್ಟವಾಗಿ, ಅಪರೂಪದ್ದಾಗಿ, ಅಂತಃಕರಣವನ್ನು ಕಲಕುವಂತೆ ಕಾಣುವ ರೂಪಕ, ಪ್ರತಿಮೆ, ಚಿತ್ರಗಳನ್ನು ಮನಸ್ಸಿನಲ್ಲಿಯೇ ಗ್ರಹಿಸಿ, ಸೋಸಿ ಅದು ನಿಜಕ್ಕೂ ಭಿನ್ನವಾಗಿದೆ ಎಂದು ಮನದಟ್ಟಾದರೆ ಅದನ್ನು ಕಾಗದದ ಹಾಳೆಯಲ್ಲೋ, ನೋಟ್‌ಪುಸ್ತಕದಲ್ಲೋ ಬರೆದಿಟ್ಟಿರುತ್ತೇನೆ. ಹೀಗೆ ದಟ್ಟೈಸಿದ ಗ್ರಹಿಕೆಗಳು ಯಾವುದೊ ಘಟನೆ, ಸಂಗತಿಯೊಂದಿಗೆ ಬೆಳೆಯತೊಡಗುತ್ತವೆ.

ಇವೆಲ್ಲ ಅನುಕ್ರಮವಾಗಿ ನಡೆಯದೆ ಅಸಂಬದ್ಧ ಕಾಲಘಟ್ಟದಲ್ಲಿ, ಸಮಯದ ಪರಿವೆಯಿಲ್ಲದೆ ಜರುಗುವ ಬಿಡಿ ಕ್ರಿಯೆಗಳು. ಟಿಪ್ಪಣಿ, ಅರ್ಧರ್ಧ ವಾಕ್ಯಸರಣಿ, ಅಸಂಗತ ಅಂಶಗಳು, ಹೊರಗಿನ ಸಂಗತಿಗಳೊಂದಿಗೆ ಸಾಮರಸ್ಯದ ಸಂಬಂಧ ಸಾಧಿಸಿ ಒಂದು ಕಥೆಯಾಗಿ ಬೆಳೆಯಬೇಕೆಂದರೆ ದೀರ್ಘಕಾಲ ಬೇಕಾಗುತ್ತದೆ. ನಾನು ಕಥೆಯನ್ನು ಬರೆಯುವುದು ನಿಧಾನ ಕ್ರಮದಲ್ಲಿ. ನನ್ನ ನೆಲೆಯಲ್ಲಿ ಈ ಕಥೆ ಮುಗಿದಿದೆ ಎನ್ನುವಾಗ ಕೆಲವೊಮ್ಮೆ ಏಳೆಂಟು ವರ್ಷಗಳೇ ಆಗಿರುದುಂಟು.

**ಲೇಖಕನಿಗೆ ಓದುಗ ಯಾವಾಗಲೂ ಅಗೋಚರ. ಒಂದು ಬಗೆಯ ರಮ್ಯ ಕಲ್ಪನೆಯಿಂದ ಹುಟ್ಟುವ ಈ ಸಂಬಂಧ ಹಾಗಿದ್ದರೇನೆ ಚೆನ್ನ. ಇಂಥ ನೂರಾರು ಅನಾಮಿಕ ಅಗೋಚರ ಓದುಗರನ್ನು ಕಥೆಗಳ ಮೂಲಕ ತಲುಪುವುದಷ್ಟೇ ಲೇಖಕನ ಕೆಲಸ.**

ಕಥೆ ಬರೆಯುವ ಮೊದಲು ನಡೆವ ಕಲ್ಪನೆ ವಾಸ್ತವಗಳ ಜೋಡಣೆ, ಕಾರ್ಯಕಾರಣದ ಹುಡುಕಾಟ, ವಿಸಂಗತಿಗಳ ಹೊಂದಾಣಿಕೆ ಇವೆಲ್ಲ ಅಂತಃಪ್ರೇರಣೆಗೆ ಸಂಬಂಧಿಸಿದ ವಿಷಯಗಳೆಂದು ಭಾವಿಸಿದ್ದೇನೆ. ಹಲವೊಮ್ಮೆ ಪಾತ್ರ ಮತ್ತು ಸನ್ನಿವೇಶಗಳು ಲೇಖಕನ ಕೈಮೀರಿ ವರ್ತಿಸಿ ಬೆಳೆದರೂ, ಕಥೆ ಬರೆಯುವಾಗಿನ ಸ್ಥಿತಿ ಯಾವತ್ತೂ ಪ್ರಜ್ಞಾಪೂರ್ವಕ. ಕಥೆ ಮತ್ತು ಕಥಾಪಾತ್ರಗಳಿಗೂ, ಬರೆಯುವವನಿಗೂ ನೇರ ಸಂಬಂಧವಿಲ್ಲ. ಆತನೇನಿದ್ದರೂ ಬರೆಯುತ್ತಿರುವ ಕಥೆ ಮುಗಿದದ್ದೇ ನಿತ್ಯದ ಜಂಜಡದ ಬದುಕನ್ನು ನಡೆಸಲು ತೆರಳಲಿರುವ ವ್ಯಕ್ತಿ. ಆದರೆ, ಆತನ ವ್ಯಕ್ತಿ ವಿಶಿಷ್ಟತೆಯಿಂದಾಗಿ ಒಂದು ಕಥೆ ಆತನಲ್ಲಿ ಮೈದಾಳುತ್ತದೆ. ಈ ಸಂಬಂಧ ಜಟಿಲವಾದುದು, ಸವಾಲಿನದ್ದು. ಎಲ್ಲವನ್ನೂ ಏಕಕಾಲದಲ್ಲಿ ನಿರ್ವಹಿಸಲು ಲೇಖಕ ತೋರಿಸುವ ಸೃಜನಶೀಲತೆ, ವಿವೇಚನೆ, ಅಪ್ಪಟ ಪ್ರಾಮಾಣಿಕತೆ, ಬದುಕಿನ ಬದ್ಧತೆ, ತನ್ಮಯತೆ ಮತ್ತು ನಿಸ್ವಾರ್ಥಗಳು ಒಂದು ಕಥೆಯ ಯಶಸ್ಸು ಮತ್ತು ಗುಣಾತ್ಮಕತೆಯನ್ನು ಕಟ್ಟಿಕೊಡುತ್ತವೆ. ಕೇವಲ ಪ್ರತಿಭೆಯೊಂದರಿಂದಲೇ ಇಲ್ಲಿ ಕೆಲಸ ಸಾಗದು. ಕೌಶಲ, ಸತತ ಪರಿಶ್ರಮ, ಕಾಯಬಲ್ಲ ಸಹನೆ ಕೂಡ ಮುಖ್ಯ.

★★★

ನನ್ನ ಕಥೆಗಳ ಒಟ್ಟಾರೆ ಆಶಯ–ದೃಷ್ಟಿಕೋನಗಳು ವಿಶಾಲನೆಲೆಯಲ್ಲಿ ಕೆಲವೊಮ್ಮೆ ಒಂದೇ ಅನ್ನಿಸಬಹುದು. ಆದರೆ, ಕಥೆಗಳ ವಿನ್ಯಾಸ, ಆಯಾಮ, ಕಥನಕ್ರಮ, ಒಳನೆಲೆಗಳು